KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜುಲೈ ೨೮, ೨೦೧೧ (ಶ್ರಾವಣ ೬, ಶಕ ವರ್ಷ ೧೯೩೩)	ಸಂಚಿಕೆ ೩೦

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಅಪಜೀ 40 ಎಫ್ಎಎಫ್ 2009, ಬೆಂಗಳೂರು, ದಿನಾಂಕ: 20–05–2011

ಕರ್ನಾಟಕ ಅರಣ್ಯ ಕಾಯ್ದೆ 1963 ರ (1964ನೇ ಇಸವಿಯ ಕಾಯ್ದೆ 5)ಕಲಂ–4ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ, ಕರಿಮನೆ ಮತ್ತು ತುಳುವಿನಕೊಪ್ಪ ಗ್ರಾಮಗಳ ಜಮೀನುಗಳನ್ನು ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಮೀಸಲು ಅರಣ್ಯವೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ಜಿಲ್ಲೆ	ಚಿಕ್ಕಮಗಳೂರು
ಕಂದಾಯ ಉಪ ವಿಭಾಗ	ಚಿಕ್ಕಮಗಳೂರು
ತಾಲ್ಲೂಕು	ಕೊಪ್ಪ
ಹೋಬಳಿ	ಕಸಬಾ
ಗ್ರಾಮಗಳು	ಬೆಳವಾಡಿ, ಕರಿಮನೆ ಮತ್ತು ತುಳುವಿನಕೊಪ್ಪ
ಅರಣ್ಯದ ಹೆಸರು	ಬೆಳವಾಡಿ ಬ್ಲಾಕ್

"ಅನುಸೂಚಿ" ಯ ವಿವರ : ಉದ್ದೇಶಿತ **"ಮೀಸಲು ಅರಣ್ಯ"** ಪ್ರದೇಶದ ಬ್ಲಾಕ್, ಗ್ರಾಮ, ಸರ್ವೆ ನಂಬರ್, ವಿಸ್ತೀರ್ಣದ ವಿವರ.

ಉದ್ದೇಶಿತ **"ಮೀಸಲು ಅರಣ್ಯ"** ಪ್ರದೇಶದಲ್ಲಿರುವ ಬ್ಲಾಕ್‌ಗಳ ಹೆಸರು	ಗ್ರಾಮ	ಸರ್ವೆ ನಂಬರ್	ಉದ್ದೇಶಿತ **"ಮೀಸಲು ಅರಣ್ಯ"** ಅಧಿಸೂಚನೆಗೆ ಒಳಪಡುವ ಪ್ರದೇಶದ ವಿಸ್ತೀರ್ಣ **ಎಕರೆ–ಗುಂಟೆ.**
ಬೆಳವಾಡಿ ಬ್ಲಾಕ್	ಬೆಳವಾಡಿ	01	64–31
		02	31–27

ಉದ್ದೇಶಿತ **"ಮೀಸಲು ಅರಣ್ಯ"** ಪ್ರದೇಶದಲ್ಲಿರುವ ಬ್ಲಾಕ್‌ಗಳ ಹೆಸರು	ಗ್ರಾಮ	ಸರ್ವೆ ನಂಬರ್	ಉದ್ದೇಶಿತ **"ಮೀಸಲು ಅರಣ್ಯ"** ಅಧಿಸೂಚನೆಗೆ ಒಳಪಡುವ ಪ್ರದೇಶದ ವಿಸ್ತೀರ್ಣ **ಎಕರೆ–ಗುಂಟೆ.**
	ಕರಿಮನೆ	97	02–16
	ತುಳುವಿನಕೊಪ್ಪ	77	15–32
	ಒಟ್ಟು ವಿಸ್ತೀರ್ಣ		**114–26**

1) ಮೇಲ್ಕಂಡ ಕಾಯ್ದೆಯ ಕಲಂ 4(1)(ಸಿ) ಪ್ರಕಾರ ಸರ್ಕಾರವು ಉಪ ವಿಭಾಗಾಧಿಕಾರಿ, ಚಿಕ್ಕಮಗಳೂರು ಉಪ ವಿಭಾಗ, ಚಿಕ್ಕಮಗಳೂರು ಇವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಮೇಲೆ ನಮೂದಿಸಿರುವ ಪ್ರದೇಶದ ಮೇಲೆ ಯಾವುದೇ ವ್ಯಕ್ತಿಗೆ ಇರಬಹುದಾಗಿರುವ ಹಕ್ಕು ಬಾದ್ಯತೆಗಳನ್ನು ಇತ್ಯರ್ಥಗೊಳಿಸಿ, ನಿರ್ಧರಿಸಿ ವಿಚಾರಣೆ ಮಾಡಿ ತೀರ್ಮಾನಿಸುವುದು.

2) ಮೇಲ್ಕಂಡ ಕಾಯ್ದೆಯ ಕಲಂ 4(2) ಪ್ರಕಾರ ಸರ್ಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪ ವಿಭಾಗ ಇವರನ್ನು ಈ ವಿಚಾರಣೆಯಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ ಸಹಕರಿಸಲು ಹಾಗೂ ಅರಣ್ಯ ಇಲಾಖೆಯನ್ನು ಪ್ರತಿನಿಧಿಸಲು ನೇಮಿಸಿದೆ.

3) ಮೇಲ್ಕಂಡ ಕಾಯ್ದೆಯ ಕಲಂ 11, 12 ಮತ್ತು 14ನೇ ಪ್ರಕರಣಗಳ ಪ್ರಕಾರ ಅರಣ್ಯ ವ್ಯವಸ್ಥಾಪನಾಧಿಕಾರಿಗಳು, ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗೆ ಬಾಧಿತ ವ್ಯಕ್ತಿಗಳು ಸಲ್ಲಿಸಿದ ಮೇಲ್ಮನವಿಗಳನ್ನು ಪರಿಶೀಲಿಸಲು ಸದರಿ ಅಧಿನಿಯಮ ಕಲಂ 16(1)ನೇ ಪ್ರಕಾರ ಕರ್ನಾಟಕ ಕಂದಾಯ ಮೇಲ್ಮನವಿ ನ್ಯಾಯ ಮಂಡಳಿಗೆ ಅಧಿಕಾರವಿರುತ್ತದೆ.

4) ಮೇಲ್ಕಂಡ ಅಧಿನಿಯಮ 15ನೇ ಪ್ರಕರಣದ ಪ್ರಕಾರ ಬಾಧಿತವಾದ ಯಾವುದೇ ವ್ಯಕ್ತಿಯು ಸದರಿ ಅಧಿನಿಯಮದ ಕಲಂ 16(2)ನೇ ಪ್ರಕಾರ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗೆ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದು.

5) **ಇತರೆ ಸವಲತ್ತುಗಳು:** ಉದ್ದೇಶಿತ **"ಮೀಸಲು ಅರಣ್ಯ"** ಪ್ರದೇಶದಲ್ಲಿ ಸ್ಥಳೀಯ ನಿವಾಸಿಗಳಿಗೆ ಎಳೆಯ ನೆಡುತೋಪು ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಪ್ರದೇಶಗಳಲ್ಲಿ ತಮ್ಮ ಜಾನುವಾರುಗಳಿಗೆ ಉಚಿತವಾಗಿ ಹುಲ್ಲು ಮೇಯಿಸಲು ಹಾಗೂ ತಮ್ಮ ಸ್ವಂತ ಉಪಯೋಗಕ್ಕಾಗಿ ಉಚಿತವಾಗಿ ಒಣ ಎಲೆ ಮತ್ತು ಒಣ ಸೌದೆಯನ್ನು ಸಂಗ್ರಹಿಸಲು ಅವಕಾಶವಿರುತ್ತದೆ. ಎನ್‌ಕ್ಲೋಷರ್‌ಗಳಲ್ಲಿರುವ ನಿವಾಸಿಗಳು ತಮ್ಮ ಸ್ವಂತ ಉಪಯೋಗಕ್ಕಾಗಿ ರಸ್ತೆಯ ಹಕ್ಕನ್ನು ಹೊಂದಿರುತ್ತಾರೆ. ಕಂದಾಯ ಇಲಾಖೆಯಿಂದ ದಿನಾಂಕ:05–06–2002 ರ ವರೆಗೆ ನೀಡಿರುವ ಸೊಪ್ಪಿನಬೆಟ್ಟ ಹಕ್ಕನ್ನು ಹಾಗೆಯೇ ಮುಂದುವರೆಸಲಾಗಿದೆ.

6) ಉದ್ದೇಶಿತ **"ಮೀಸಲು ಅರಣ್ಯ"** ಪ್ರದೇಶದ ಪ್ರತಿ ಬ್ಲಾಕ್‌ಗೆ ಸಂಬಂಧಿಸಿದ ಸಂಕ್ಷಿಪ್ತ ಸರಹದ್ದು ವಿವರಣೆ ಮತ್ತು ಸವಿವರವಾದ ಸರಹದ್ದು ವಿವರಗಳನ್ನು ಮುಂದೆ ವಿವರಿಸಿದೆ.

ಬೆಳವಾಡಿ ಬ್ಲಾಕ್

ಬೆಳವಾಡಿ ಬ್ಲಾಕ್‌ನ ಸಂಕ್ಷಿಪ್ತ ಸರಹದ್ದು ವಿವರ

ಉತ್ತರ: ಬೆಳವಾಡಿ ಗ್ರಾಮದ ಸರ್ವೆ ನಂಬರ್ 2, 1 ಮತ್ತು 2 ರ ಉಳಿಕೆ ಹಾಗೂ ತುಳುವಿನಕೊಪ್ಪ ಗ್ರಾಮದ ಸರ್ವೆ ನಂಬರ್ 77 ರ ಉಳಿಕೆ ಪ್ರದೇಶ.

ಪೂರ್ವ: ತುಳುವಿನಕೊಪ್ಪ ಗ್ರಾಮದ ಸರ್ವೆ ನಂಬರ್ 77 ಕರಿಮನೆ ಗ್ರಾಮದ ಸರ್ವೆ ನಂಬರ್ 97, ಬೆಳವಾಡಿ ಗ್ರಾಮದ ಸರ್ವೆ ನಂಬರ್ 1 ರ ಉಳಿಕೆ ಪ್ರದೇಶ.

ದಕ್ಷಿಣ: ಬೆಳವಾಡಿ ಗ್ರಾಮದ ಸರ್ವೆ ನಂಬರ್ 01 ರ ಉಳಿಕೆ ಪ್ರದೇಶ.

ಪಶ್ಚಿಮ: ಬೆಳವಾಡಿ ಗ್ರಾಮದ ಸರ್ವೆ ನಂಬರ್ 01 ರ ಉಳಿಕೆ ಪ್ರದೇಶ ಮತ್ತು ಸೀತಾ ನದಿ.

ಸವಿವರವಾದ ಸರಹದ್ದು ವಿವರ

ಉತ್ತರ : ಸೀಮಾರೇಖೆಯ ಬೆಳವಾಡಿ ಗ್ರಾಮದ ಸರ್ವೆ ನಂಬರ್ 11, 12, 13 ರ ಮುಕ್ಕುಪ್ಪೆ ಬಾಂದು (ಸರ್ವೆ ನಂಬರ್ 13 ರ ಈಶಾನ್ಯ ಬಾಂದು) ನಿಂದ 184^0 ಕೋನ 12–00 ಸರಪಳಿ ದೂರದಲ್ಲಿ ಸೀತಾನದಿ ಬಲದಂಡೆ ಮೇಲಿರುವ ಸ್ಥಾನ ಸಂಖ್ಯೆ 1 ರಿಂದ ಪ್ರಾರಂಭವಾಗಿ ಬೆಳವಾಡಿ ಗ್ರಾಮದ ಸರ್ವೆ ನಂಬರ್ 02, 01 ಮತ್ತು 02 ರಲ್ಲಿ ವಿವಿಧ ಕೋನಗಳಲ್ಲಿ 37–35 ಸರಪಳಿ ದೂರ ಚಲಿಸಿ ಸರ್ವೆ ನಂಬರ್ 11, 12, ಮತ್ತು 13ರ ಕೂಡು ಬಾಂದಿನಿಂದ 112^0 ಕೋನ 11–50 ಸರಪಳಿ ದೂರದಲ್ಲಿ ಸ್ಥಾನ ಸಂಖ್ಯೆ 8 ನ್ನು ಸೇರಿ, ನಂತರ ಬೆಳವಾಡಿ ಗ್ರಾಮದ ಸರ್ವೆ ನಂಬರ್ 2 ರಲ್ಲಿ ವಿವಿಧ ಕೋನಗಳಲ್ಲಿ ಚಲಿಸಿ **18–35** ಸರಪಳಿ ದೂರ ಚಲಿಸಿ ಸರ್ವೆ ನಂಬರ್ 7 ಮತ್ತು 6 ರ ದಕ್ಷಿಣ ದಿಕ್ಕಿನ ಕೂಡುಬಾಂದಿ ನಿಂದ 184^0 ಕೋನ 2–40 ಸರಪಳಿ ದೂರದಲ್ಲಿರುವ ಸ್ಥಾನ ಸಂಖ್ಯೆ 12 ನ್ನು ತಲುಪುತ್ತದೆ. ನಂತರ ಸೀಮಾರೇಖೆಯು ಬೆಳವಾಡಿ ಸರ್ವೆ ನಂಬರ್ 02 ರಲ್ಲಿ ವಿವಿಧ ಕೋನಗಳಲ್ಲಿ **21–25** ಸರಪಳಿ ದೂರ ಚಲಿಸಿ ಸರ್ವೆ ನಂಬರ್ 7 ಮತ್ತು 6 ರ ದಕ್ಷಿಣ ದಿಕ್ಕಿನ ಕೂಡು ಬಾಂದಿನಿಂದ 99^0 ಕೋನ 10–05 ಸರಪಳಿ ದೂರದಲ್ಲಿ ಬೆಳವಾಡಿ–ತುಳುವಿನ ಕೊಪ್ಪ ಗಡಿಯಲ್ಲಿ ಸ್ಥಾನಸಂಖ್ಯೆ 16 ನ್ನು ತಲುಪುತ್ತದೆ. ನಂತರ ಸೀಮಾರೇಖೆಯು ತುಳುವಿನಕೊಪ್ಪ ಗ್ರಾಮದ ಸರ್ವೆ ನಂಬರ್ 77 ರಲ್ಲಿ ವಿವಿಧ ಕೋನಗಳಲ್ಲಿ **9–00** ಸರಪಳಿ ದೂರ ಚಲಿಸಿ

ತುಳುವಿನಕೊಪ್ಪ ಗ್ರಾಮದ ಸರ್ವೆ ನಂಬರ್ 75 ರ ನೈರುತ್ಯ ದ್ವಿಕುಪ್ಪೆ ಬಾಂದುವಿನಲ್ಲಿ ಸ್ಥಾನ ಸಂಖ್ಯೆ 18 ನ್ನು ತಲುಪುತ್ತದೆ ನಂತರ ಸೀಮಾರೇಖೆಯು ತುಳುವಿನಕೊಪ್ಪ ಗ್ರಾಮದ ಸರ್ವೆ ನಂಬರ್ 77 ರಲ್ಲಿ ವಿವಿಧ ಕೋನಗಳಲ್ಲಿ **20–55** ಸರಪಳಿ ದೂರ ಚಲಿಸಿ ತುಳುವಿನಕೊಪ್ಪ ಸರ್ವೆ ನಂಬರ್ 74, 76, 75 ರ ಕೂಡುಬಾಂದಿನಿಂದ ವಾಯುವ್ಯಕ್ಕೆ ಸರ್ವೆ ನಂಬರ್ 75 ರ ಉತ್ತರ ಗಡಿಯಲ್ಲಿನ ಮೊದಲನೇ ಕಲ್ಲು ಬಾಂದಿನಿಂದ 97^0 ಕೋನ 10–00 ಸರಪಳಿ ದೂರದಲ್ಲಿರುವ ಸ್ಥಾನ ಸಂಖ್ಯೆ 22 ನ್ನು ಸೇರುತ್ತದೆ.

ಉತ್ತರದಲ್ಲಿ ಸೀಮಾರೇಖೆಯು ಕೆಳಕಂಡಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
01	02	071^0	3–80
02	03	024^0	3–50
03	04	076^0	4–95
04	05	230^0	5–65
05	06	160^0	6–05
06	07	041^0	9–65
07	08	329^0	3–75
			37–35
08	09	061^0	6–75
09	10	099^0	5–40
10	11	049^0	3–10
11	12	078^0	3–10
			18–35
12	13	165^0	5–45
13	14	110^0	4–45
14	15	101^0	2–90
15	16	014^0	8–45
			21–25
16	17	104^0	7–05
17	18	ತುಳುವಿನಕೊಪ್ಪ ಸರ್ವೆ ನಂಬರ್ 75 ರ ನೈರುತ್ಯ ದ್ವಿಕುಪ್ಪೆ ಬಾಂದುವಿಗೆ	1–95
			9–00
18	19	133^0	1–25
19	20	093^0	7–35
20	21	107^0	7–90
21	22	045^0	4–05
			20–55

ಪೂರ್ವ: ಸೀಮಾರೇಖೆಯು ಸ್ಥಾನ ಸಂಖ್ಯೆ 22 ರಿಂದ ತುಳುವಿನಕೊಪ್ಪ ಗ್ರಾಮದ ಸರ್ವೆ ನಂಬರ್ 77 ರಲ್ಲಿ ಮತ್ತು ಕರಿಮನೆ ಗ್ರಾಮದ ಸರ್ವೆ ನಂಬರ್ 97 ರಲ್ಲಿ **10–40** ಸರಪಳಿ ದೂರ ಚಲಿಸಿ ಬೆಳವಾಡಿ, ತುಳುವಿನಕೊಪ್ಪ, ಕರಿಮನೆ ಗ್ರಾಮಗಳ ಮುಕ್ಕುಪ್ಪೆ ಬಾಂದಿನಿಂದ 135^0 ಕೋನ 1–95 ಸರಪಳಿ ದೂರದಲ್ಲಿರುವ ಸ್ಥಾನ ಸಂಖ್ಯೆ 24 ನ್ನು ತಲುಪಿ ಪುನಃ ಕರಿಮನೆ ಸರ್ವೆ ನಂಬರ್ 97 ಹಾಗೂ ಬೆಳವಾಡಿ ಗ್ರಾಮದ ಸರ್ವೆ ನಂಬರ್ 1ರಲ್ಲಿ ವಿವಿಧ ಕೋನಗಳಲ್ಲಿ **13–70** ಸರಪಳಿ ದೂರ ಚಲಿಸಿ ಬೆಳವಾಡಿ ಗ್ರಾಮದ ಸರ್ವೆ ನಂಬರ್ 51ರ ದಕ್ಷಿಣ ಬಾಂದಿನಿಂದ 126^0 ಕೋನ 3–25 ಸರಪಳಿ ದೂರದಲ್ಲಿರುವ ಸ್ಥಾನ ಸಂಖ್ಯೆ 26 ನ್ನು ತಲುಪುತ್ತದೆ.

ಪೂರ್ವದಲ್ಲಿ ಸೀಮಾರೇಖೆಯು ಕೆಳಕಂಡಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
22	23	148^0	2–95
23	24	182^0	7–45
			10–40
24	25	185^0	6–80
25	26	207^0	6–90
			13–70

ದಕ್ಷಿಣ: ಸೀಮಾರೇಖೆಯು ಸ್ಥಾನ ಸಂಖ್ಯೆ 26 ರಿಂದ ಮುಂದುವರೆದು ಬೆಳವಾಡಿ ಗ್ರಾಮದ ಸರ್ವೆ ನಂಬರ್ 1 ರಲ್ಲಿ ವಿವಿಧ ಕೋನಗಳಲ್ಲಿ **19–50** ಸರಪಳಿ ದೂರ ಚಲಿಸಿ ಬೆಳವಾಡಿ ಸರ್ವೆ ನಂಬರ್ 31, 33 ರ ಪೂರ್ವ ದಿಕ್ಕಿನ ಕೂಡುಬಾಂದಿನಿಂದ 117^0 ಕೋನ 1–25 ಸರಪಳಿ ದೂರದಲ್ಲಿರುವ ಸ್ಥಾನ ಸಂಖ್ಯೆ 30 ನ್ನು ತಲುಪಿ, ನಂತರ ಬೆಳವಾಡಿ ಸರ್ವೆ ನಂಬರ್ 1 ರಲ್ಲಿ ವಿವಿಧ ಕೋನಗಳಲ್ಲಿ **31–40** ಸರಪಳಿ ದೂರ ಚಲಿಸಿ ಸರ್ವೆ ನಂಬರ್ 31, 33 ರ ಪೂರ್ವ ದಿಕ್ಕಿನ ಕೂಡುಬಾಂದಿನಿಂದ ಈಶಾನ್ಯಕ್ಕೆ ಸರ್ವೆ ನಂಬರ್ 31 ರ ಪೂರ್ವ ಗಡಿಯಲ್ಲಿ 5 ನೇ ಬಾಂದು ಕಲ್ಲಿನಿಂದ 278^0 ಕೋನ 9–45 ಸರಪಳಿ ದೂರದಲ್ಲಿರುವ ಸ್ಥಾನ ಸಂಖ್ಯೆ 37 ನ್ನು ತಲುಪಿ, ಮುಂದುವರೆದು ಬೆಳವಾಡಿ ಸರ್ವೆ ನಂಬರ್ 1 ರಲ್ಲಿಯೇ ವಿವಿಧ ಕೋನಗಳಲ್ಲಿ **26–60** ಸರಪಳಿ ದೂರ ಚಲಿಸಿ ಸರ್ವೆ ನಂಬರ್ 26, 28 ಉತ್ತರ ದಿಕ್ಕಿನ ಕೂಡುಬಾಂದುವಿನಿಂದ 295^0 ಕೋನ ಮತ್ತು 6–05 ಸರಪಳಿ ದೂರದಲ್ಲಿರುವ ಸ್ಥಾನ ಸಂಖ್ಯೆ 44 ನ್ನು ತಲುಪುತ್ತದೆ.

ದಕ್ಷಿಣದಲ್ಲಿ ಸೀಮಾರೇಖೆಯು ಕೆಳಕಂಡಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
26	27	268^0	6–95
27	28	180^0	1–35
28	29	261^0	4–40
29	30	270^0	6–80
			19–50
30	31	052^0	4–05
31	32	064^0	3–75
32	33	018^0	5–00
33	34	293^0	6–45
34	35	277^0	3–80
35	36	166^0	2–00
36	37	226^0	6–35
			31–40
37	38	250^0	7–35
38	39	282^0	3–40
39	40	165^0	3–35
40	41	248^0	2–30
41	42	304^0	4–55

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
42	43	164^0	3–40
43	44	144^0	2–25
			26–60

ಪಶ್ಚಿಮ: ಸೀಮಾರೇಖೆಯು ಸ್ಥಾನ ಸಂಖ್ಯೆ 44 ರಿಂದ ಬೆಳವಾಡಿ ಸರ್ವೆ ನಂಬರ್ 1 ರಲ್ಲಿ ವಿವಿಧ ಕೋನಗಳಲ್ಲಿ **19–15** ಸರಪಳಿ ದೂರ ಚಲಿಸಿ ಬೆಳವಾಡಿ ಸರ್ವೆ ನಂಬರ್ 19 ರ ಈಶಾನ್ಯ ಬಾಂದುವಿನಲ್ಲಿ ಸ್ಥಾನ ಸಂಖ್ಯೆ 47 ನ್ನು ತಲುಪುತ್ತದೆ. ಮುಂದುವರೆದು ಸೀಮಾರೇಖೆಯು ಬೆಳವಾಡಿ ಸರ್ವೆ ನಂಬರ್ 1 ರಲ್ಲಿ ವಿವಿಧ ಕೋನಗಳಲ್ಲಿ **9–15** ಸರಪಳಿ ದೂರ ಚಲಿಸಿ ಸರ್ವೆ ನಂಬರ್ 18, 1 ಮತ್ತು ಸೀತಾ ನದಿ ಸೇರುವ ಕೂಡುಬಾಂದುವಿನಲ್ಲಿ ಸ್ಥಾನ ಸಂಖ್ಯೆ 50 ನ್ನು ಸೇರುತ್ತದೆ. ನಂತರ ಸೀಮಾರೇಖೆಯು ಸೀತಾ ನದಿಯ ಬಲದಂಡೆಯಲ್ಲಿ ಸುಮಾರು **7–40** ಸರಪಳಿ ದೂರ ಚಲಿಸಿ, ಸ್ಥಾನಸಂಖ್ಯೆ 51ರ ಮುಖಾಂತರ ಪ್ರಾರಂಭಿಕ ಸ್ಥಾನ ಸಂಖ್ಯೆ 1 ನ್ನು ಸೇರುತ್ತದೆ.

ಪಶ್ಚಿಮದಲ್ಲಿ ಸೀಮಾರೇಖೆಯು ಕೆಳಕಂಡಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
44	45	264^0	1–45
45	46	303^0	4–75
46	47	ಬೆಳವಾಡಿ ಸರ್ವೆ ನಂಬರ್ 19 ರ ಈಶಾನ್ಯ ಬಾಂದುವಿನಲ್ಲಿ	12–95
			19–15
47	48	268^0	1–60
48	49	297^0	05–10
49	50	232^0	02–45
			9–15
50	51	ಸೀತಾನದಿಯ ಬಲದಂಡೆ.	06–00
51	01	ಸೀತಾನದಿಯ ಬಲದಂಡೆ.	01–40
			7–40

ಬೆಳವಾಡಿ ಮೀಸಲು ಅರಣ್ಯ ಬ್ಲಾಕ್‌ನಲ್ಲಿರುವ ಎನ್‌ಕ್ಲೋಸರ್–1 ರ ಸರಹದ್ದು ವಿವರ

ಬೆಳವಾಡಿ, ಕರಿಮನೆ, ತುಳುವಿನಕೊಪ್ಪ, ಗ್ರಾಮಗಳ ಗಡಿ ಬಾಂದಿನಿಂದ ಬೆಳವಾಡಿ ಸರ್ವೆ ನಂಬರ್ 1 ರಲ್ಲಿ 269^0 ಕೋನ 16–15 ಸರಪಳಿ ದೂರದಲ್ಲಿ ಸ್ಥಾನ ಸಂಖ್ಯೆ 1 ರಿಂದ ಪ್ರಾರಂಭವಾಗಿ ವಿವಿಧ ಕೋನಗಳಲ್ಲಿ 15–00 ಸರಪಳಿ ಚಲಿಸಿ ಪ್ರಾರಂಭಿಕ ಸ್ಥಾನ ಸಂಖ್ಯೆ 1 ನ್ನು ಸೇರುತ್ತದೆ.

ಎನ್‌ಕ್ಲೋಸರ್–1 ರ ಸೀಮಾರೇಖೆಯು ಕೆಳಕಂಡಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
1	2	098^0	5–45
2	3	206^0	3–15

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
3	4	294^0	4–70
4	1	010^0	1–70
			15–00

ಎನ್‌ಕ್ಲೋಸರ್–2 ಮತ್ತು 3

ಬೆಳವಾಡಿ ಗ್ರಾಮದ ಸರ್ವೆ ನಂಬರ್ 51 ಎನ್‌ಕ್ಲೋಸರ್–2 ಆಗಿರುತ್ತದೆ.

ಬೆಳವಾಡಿ ಗ್ರಾಮದ ಸರ್ವೆ ನಂಬರ್ 1/1 ಎನ್‌ಕ್ಲೋಸರ್–3 ಆಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಪಿ. ರಾಮಕೃಷ್ಣ

ಪಿ.ಆರ್.517

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 459 ಪಿಐಎಂ, 2009, ಬೆಂಗಳೂರು, ದಿನಾಂಕ:23.07.2011

ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿ ನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣಗಳ ಅಧಿನಿಯಮ 1961ರ 3ನೇ ಪ್ರಕರಣ ಮತ್ತು ಉಪ ಪ್ರಕರಣ (3)(ಎ) ಹಾಗೂ (ಬಿ) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಜ್ಯ ಸರ್ಕಾರವು ಈ ಕೆಳಕಂಡ ನಾಮನಿರ್ದೇಶಿತ ಮತ್ತು ಚುನಾಯಿತ ಸದಸ್ಯರುಗಳನ್ನೊಳಗೊಂಡಂತೆ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯನ್ನು ಮುಂದಿನ ಆದೇಶದವರೆಗೆ ಪುನರ್ ರಚನೆ ಮಾಡಿ ಆದೇಶಿಸಿದೆ.

ನಾಮನಿರ್ದೇಶಿತ ಸದಸ್ಯರುಗಳು

1. ನಿರ್ದೇಶಕರು
ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
2. ಡಾ: ಕೊಟ್ರಮ್ಮ
ಸರ್ಕಾರಿ ಆಯುರ್ವೇದ ಔಷಧಾಲಯ, ಹಡಗಲಿ, ಬಳ್ಳಾರಿ ಜಿಲ್ಲೆ.
3. ಡಾ: ವೇದಾವತಿ
ನಂ.20–ಎ, ಶಿವಶ್ರೀ, ಊಟಗಳ್ಳಿ, ಮೈಸೂರು.
4. ಡಾ:ಕೆ. ಪ್ರಭಾಕರ್ ನಂಬಿಯಾರ್
ಎನ್.ಹೆಚ್.17, ಶಿರೂರು ಅಂಚೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
5. ಡಾ: ಸತ್ಯಮೂರ್ತಿ ಭಟ್
ಆಶ್ರಯ, ನಂ.2460, ಹೈಟೆನ್ಷನ್ ಡಬಲ್ ರೋಡ್, 2ನೇ ಹಂತ, ವಿಜಯನಗರ, ಮೈಸೂರು.
6. ಡಾ: ನಂದಿಕೋಲು ಬಸವರಾಜ್ ಮುರುಗಯ್ಯ,
ಮನೆ ನಂ.625, "ಶ್ರೀನಿಧಿ" ಸಾಯಿಬಾಬಾ ಟೆಂಪಲ್ ಹತ್ತಿರ, ಕೀರ್ತಿನಗರ, ಬಿಜಾಪುರ.
7. ಡಾ: ಎಂ.ಜಿ.ಆರ್. ಅರಸ್
905/159, 4ನೇ ಕ್ರಾಸ್, ವಿದ್ಯಾರಣ್ಯಪುರ, ಮೈಸೂರು.
8. ಡಾ: ವಾಸುದೇವ ಹೊಳ್ಳ ಎಂ.
ಹಳೆ ಪೊಲೀಸ್ ಠಾಣೆ ಎದುರು, ಎನ್.ಹೆಚ್.17, ಮಣೂರು ಅಂಚೆ, ಉಡುಪಿ ಜಿಲ್ಲೆ.
9. ಡಾ: ರುದ್ರಮನಿ ಎಸ್. ಅರಳೆಲೆಮಠ್
ನೇಕಾರ ಓಣಿ, ಬಂಕಾಪುರ ಪೋಸ್ಟ್, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ.
10. ಡಾ: ಬಿ.ಎಸ್. ಶ್ರೀಧರ್
ಪ್ರೊಫೆಸರ್, ಸರ್ಕಾರಿ ಆಯುರ್ವೇದ ವೈದ್ಯ ಮಹಾವಿದ್ಯಾಲಯ, ಬೆಂಗಳೂರು.

ಚುನಾಯಿತ ಸದಸ್ಯರುಗಳು

ಆಯುರ್ವೇದ

11. ಡಾ: ಹಿರೇಮಠ ಸಂಗಯ್ಯ ರಾಚಯ್ಯ
ಒಕ್ಕಲಿಗರ ಓಣಿ, ಗೆಳೆಯರ ಬಳಗ, ಗದಗ–582 101.
12. ಡಾ: ವಾಲಿ ಅಶೋಕ್ ಮಲ್ಲಿಕಾರ್ಜುನ್
ಶಿವಯೋಗಿ ನಿಲಯ, Opp:DEDE ಆಸ್ಪತ್ರೆ, ವಿದ್ಯಾನಗರ ಕಾಲೋನಿ, ಬಿಜಾಪುರ–03.

13. ಡಾ: ಹುನಗುಂಡ ಬಸವರಾಜ್ ಭರಮಪ್ಪ ಆನಂದ್, ಮನೆ ನಂ.6, ಜ್ಞಾನೆವರ್, ಆನಂದ ನಗರ ರೋಡ್, ಹುಬ್ಬಳ್ಳಿ–24.

14. ಡಾ: ಬಸವನಗೌಡ ಸಾಹೇಬ್ ಗೌಡ ಪಾಟೀಲ್, ನಂ.318, ಶರಾವತಿ ಬ್ಲಾಕ್, ಬಿ–4, ಎಸ್.ಜಿ.ವಿ. ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು–49.

15. ಡಾ: ಅಜಿತ್ ಕುಮಾರ್ ವಿ. ನಂ.40, ನಿಲಾದ್ರ, 1ನೇ ಮೈನ್, 2ನೇ ಕ್ರಾಸ್, ಆರ್.ಹೆಚ್.ಬಿ. ಕಾಲೋನಿ, ಮಹದೇವಪುರ, ಬೆಂಗಳೂರು–48.

ಇಂಟಿಗ್ರೇಟೆಡ್

16. ಡಾ: ಮಹಮ್ಮದ್ ರಫೀ ಹೆಚ್. ಹಕೀಂ #317/ಎ, 1ನೇ ಮಹಡಿ, 3ನೇ ಕ್ರಾಸ್, ಗಾಯಿತ್ರಿನಗರ, ಶ್ರೀರಾಂಪುರ ಪೋಸ್ಟ್, ಬೆಂಗಳೂರು–21.

17. ಡಾ: ಜೆ. ಅಪ್ರಮೇಯ ರಾಮನ್ #1478, ಡಾ: ಅಂಬೇಡ್ಕರ್ ಪೋಸ್ಟ್, ಕೆ.ಎಂ.ಪುರಂ, ಮೈಸೂರು–570 004.

ಯುನಾನಿ

18. ಡಾ: ಖಾಲಿದ್ ಜಾವಿದ್ #11/2, 8ನೇ ಕ್ರಾಸ್, ಗಂಗಾಧರ್‌ನಗರ, 100 ಅಡಿ ವರ್ತುಲ ರಸ್ತೆ, ಜೆ.ಪಿ.ನಗರ ಅಂಚೆ, ಬೆಂಗಳೂರು–78

19. ಡಾ: ಶಹಾಬುದ್ದೀನ್ C/o ನಿಕಾರ್ ಅಹ್ಮದ್ ಮನೆ ನಂ.4/76, 2ನೇ ಮೈನ್, ಬಿಸ್ಮಿಲ್ಲಾನಗರ, ಬೆಂಗಳೂರು–29.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಇಟಗಿ

ಪಿ.ಆರ್.757

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 63 ಎಫ್‌ಪಿಆರ್ 2011, ಬೆಂಗಳೂರು, ದಿನಾಂಕ:14.03.2011

ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಆಕುಕ 127 ಸಿಜಿಇ 2007, ದಿನಾಂಕ:12.07.2007 ರ ಅನ್ವಯ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಕುಂಬರಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಆದೇಶಿಸಿದೆ.

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ಷರಾ
1.	ಶ್ರೀ ಸದಾಶಿವ ಬಿನ್ ರಂಜಪ್ಪ ಕೆ.ಟಿ. ಕುಂಬರಡಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾ:	ಸಾಮಾನ್ಯ
2.	ಶ್ರೀಮತಿ ಅಕ್ಕಮ್ಮ ಕೋಂ ಸಿದ್ದಪ್ಪ, ಕುಂಬರಡಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾ:	ಮಹಿಳೆ
3.	ಶ್ರೀ ಎಸ್.ಸಿ. ಸೋಮ ಬಿನ್ ಗುರುವ, ಕುಂಬರಡಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾ:	ಎಸ್.ಸಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ. ಹೇಮನಾಥ್

ಪಿ.ಆರ್.320

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 63 ಎಫ್‌ಪಿಆರ್ 2011, ಬೆಂಗಳೂರು, ದಿನಾಂಕ:14.03.2011

ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಆಕುಕ 127 ಸಿಜಿಇ 2007, ದಿನಾಂಕ:12.07.2007 ರ ಅನ್ವಯ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಹೆತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಆದೇಶಿಸಿದೆ.

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ಷರಾ
1.	ಶ್ರೀ ಲೋಕೇಶ ಬಿನ್ ಲೇಟ್ ವಸಂತ್, ಹೆತ್ತೂರು, ಹೆತ್ತೂರು ಹೋಬಳಿ, ಸಕಲೇಶಪುರ ತಾ:	ಸಾಮಾನ್ಯ
2.	ಶ್ರೀ ಈರಪ್ಪ ಬಿನ್ ಈರಯ್ಯ, ಧರ್ಮಕಾಡು, ಹೆತ್ತೂರು ಹೋಬಳಿ, ಸಕಲೇಶಪುರ ತಾ:	ಎಸ್.ಸಿ.
3.	ಶ್ರೀಮತಿ ಗೀತ ಕೋಂ ಕುಸಾಲಪ್ಪ, ಹೆತ್ತೂರು ಗ್ರಾಮ, ಸಕಲೇಶಪುರ ತಾ:	ಮಹಿಳೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ. ಹೇಮನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್.321

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 43 ಸಿಜಿಇ 2009, ಬೆಂಗಳೂರು, ದಿನಾಂಕ:11.04.2011

ಸರ್ಕಾರದ ಆದೇಶ ಸಂಖ್ಯೆ ಆಕುಕ 319 ಸಿಜಿಇ 2006, ದಿನಾಂಕ:18.01.2007 ರ ಅನ್ವಯ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕು ಮಟ್ಟದ ಆಸ್ಪತ್ರೆ ಆರೋಗ್ಯ ರಕ್ಷಾ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಆದೇಶಿಸಿದೆ.

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ವರ್ಗ
1.	ಶ್ರೀಮತಿ ಅನ್ನಪೂರ್ಣ ಕೋಂ ಸಾವಂತ್, ಹೊಸ ಮನೆ, ಭದ್ರಾವತಿ, ಶಿವಮೊಗ್ಗ ಜಿಲ್ಲೆ.	ಮಹಿಳೆ
2.	ಶ್ರೀ ವೇದಮೂರ್ತಿ ಬಿನ್ ಬಸವರಾಜಪ್ಪ, ಉಪ್ಪಾರರ ಬೀದಿ, ಹಳೇನಗರ, ಭದ್ರಾವತಿ ಶಿವಮೊಗ್ಗ ಜಿಲ್ಲೆ.	ಸಾಮಾನ್ಯ
3.	ಶ್ರೀ ಜಗದೀಶ್ ಬಿನ್ ಗುರುಮೂರ್ತಿ ಕೂಡ್ಲಿಗೆರೆ ಗ್ರಾಮ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.	ಸಾಮಾನ್ಯ
4.	ಶ್ರೀ ಮಂಜುನಾಥ್ ಬಿನ್ ಚಂದ್ರಪ್ಪ ಮಹಿಮಾ ಫೋಟೋ ಸ್ಟುಡಿಯೋ, ಶಂಕರಘಟ್ಟ, ಬಿ.ಆರ್.ಪಿ. ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.	ಸಾಮಾನ್ಯ
5.	ಶ್ರೀ ನಂಜುಂಡಪ್ಪ ಬಿನ್ ಮಂಜಪ್ಪ, ವಡ್ಡರಹಟ್ಟಿ, ಅರೆಬಿಳಚಿ ಅಂಚೆ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.	ಎಸ್.ಸಿ.
6.	ಶ್ರೀ ಹೆಚ್.ಎಸ್. ಜಗನ್ನಾಥ ಬಿನ್ ಸಿದ್ದಪ್ಪ, ಉಪ್ಪಾರರ ಬೀದಿ, ಹೊಳೆಹೊನ್ನೂರು, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ. ಹೇಮನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್.368